ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ
ನವನಗರ, ಹುಬ್ಬಳ್ಳಿ – 580025
ದೂರವಾಣಿ ಸಂಖ್ಯೆ : 0836–2222392, ಫ್ಯಾಕ್ಸ್ : 0836–2223392

ಸಂಖ್ಯೆ: ಕರಾಕಾವಿ/ಆಡಳಿತ/2016–17/0711 ದಿನಾಂಕ: 14-07–2016

# ಅಧಿಸೂಚನೆ

**ವಿಷಯ** : ವಿಶ್ವವಿದ್ಯಾಲಯದ ಗ್ರಂಥಾಲಯ ಸಲಹಾ ಸಮಿತಿ (Library Advisory Committee) ರಚನೆ ಮಾಡುವ ಕುರಿತು.

**ಉಲ್ಲೇಖ** : 1. ದಿನಾಂಕ : 31–5–2016ರಂದು ಜರುಗಿದ 51ನೇ ಸಿಂಡಿಕೇಟ್ ಸಭೆಯ ನಡುವಳಿ (ವಿಷಯ ಸಂಖ್ಯೆ: 29)

2. ಮಾನ್ಯ ಕುಲಪತಿಗಳ ಪತ್ರದ ಸಂಖ್ಯೆ : KSLU/VCS/2016-17 ದಿನಾಂಕ : 11–7–2016.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಅಧಿನಿಯಮ–2009ರ ಕಲಂ 43 (read with Section 2 of the Statue relating to the power and function of the Library Advisory Committee) ರನ್ವಯ ವಿಶ್ವವಿದ್ಯಾಲಯದ ಗ್ರಂಥಾಲಯಕ್ಕೆ ಸಂಬಂಧಿಸಿದ ಕಾರ್ಯಕಲಾಪಗಳನ್ನು ನಿರ್ವಹಿಸಲು **ಗ್ರಂಥಾಲಯ ಸಲಹಾ ಸಮಿತಿ (Library Advisory Committee)**ಯನ್ನು ಪುನರ್‌ರಚಿಸಲು ದಿನಾಂಕ : 31–5–2016ರಂದು ಜರುಗಿದ 51ನೇ ಸಿಂಡಿಕೇಟ್ ಸಭೆಯು ಉಲ್ಲೇಖ 1ರಡಿ ನಮೂದಿಸಿದ ನಡುವಳಿಯಲ್ಲಿ ಅನುಮೋದನೆಯನ್ನು ಪಡೆದುಕೊಳ್ಳಲಾಗಿದೆ. ಸದರ ಸಮಿತಿಗೆ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರನ್ನು ಗೊತ್ತುಮಾಡಲು ಮಾನ್ಯ ಕುಲಪತಿಗಳಿಗೆ ಸಿಂಡಿಕೇಟ್ ಸೂಚಿಸಿದಂತೆ, ಮಾನ್ಯ ಕುಲಪತಿಗಳು ಉಲ್ಲೇಖ 2ರಡಿ ನಮೂದಿಸಿದ ತಮ್ಮ ಪತ್ರದಲ್ಲಿ ಸದಸ್ಯರುಗಳ ಹೆಸರನ್ನು ನಮೂದಿಸಿರುತ್ತಾರೆ. ಕಾರಣ ಆ ಮೇರೆಗೆ **ಗ್ರಂಥಾಲಯ ಸಲಹಾ ಸಮಿತಿ (Library Advisory Committee)**ಯನ್ನು ಈ ಕೆಳಗಿನಂತೆ ಪುನರ್‌ರಚಿಸಿದೆ.

## ಗ್ರಂಥಾಲಯ ಸಲಹಾ ಸಮಿತಿ (Library Advisory Committee)

| ಅ.ನಂ. | ಹೆಸರು | ಪದನಾಮ |
|---|---|---|
| 1. | ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀ ಎಂ. ಪಾರ್ಥ, ಸಿಂಡಿಕೇಟ್ ಸದಸ್ಯರು | ಸದಸ್ಯರು |
| 3. | ಶ್ರೀ ಸುಧೀಂದ್ರ ಮೂರ್ತಿ ವಿ., ಸಿಂಡಿಕೇಟ್ ಸದಸ್ಯರು | ಸದಸ್ಯರು |
| 4. | ಶ್ರೀ ವೆಂಕಟಾಚಲಪತಿ (ಪ್ರಶಿಕ್ಷಣ ಪರಿಷತ್ ಸಮಿತಿಯ ನಾಮನಿರ್ದೇಶಿತ ಸದಸ್ಯರು) | ಸದಸ್ಯರು |
| 5. | ಶ್ರೀಮತಿ ಸಯೀದಾ ಷಹನಾಜ್ (ಪ್ರಶಿಕ್ಷಣ ಪರಿಷತ್ ಸಮಿತಿಯ ನಾಮನಿರ್ದೇಶಿತ ಸದಸ್ಯರು) | ಸದಸ್ಯರು |

| | | |
|---|---|---|
| 6. | ನಿರ್ದೇಶಕರು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕಾನೂನು ಶಾಲೆ | ಸದಸ್ಯರು |
| 7. | ಗ್ರಂಥಪಾಲರು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ | ಸದಸ್ಯ ಕಾರ್ಯದರ್ಶಿಗಳು |

ಸದರ ಸಮಿತಿಯು ಈ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವುದು ಹಾಗೂ ಸಮಿತಿಯ ಕಾರ್ಯಾವಧಿಯು ಸಿಂಡಿಕೇಟ್ ಸಮಿತಿಯ ಕಾರ್ಯಾವಧಿಗೆ ಸಮಾನಾಂತರವಾಗಿರುತ್ತದೆ.

ತಮ್ಮ ವಿಶ್ವಾಸಿ,

19/07/16

ಕುಲಸಚಿವರು

ಗೆ,

ಗ್ರಂಥಾಲಯ ಸಲಹಾ ಸಮಿತಿ (**Library Advisory Committee**)
ಸಮಿತಿಯ ಎಲ್ಲ ಸದಸ್ಯರಿಗೆ

ಪ್ರತಿಯನ್ನು,

1. ವಿಶ್ವವಿದ್ಯಾಲಯದ ಎಲ್ಲ ವಿಭಾಗದ ಮುಖ್ಯಸ್ಥರುಗಳಿಗೆ.
2. ಮುಖ್ಯಸ್ಥರು, ಐ.ಸಿ.ಟಿ. ವಿಭಾಗ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ ಇವರ ಮಾಹಿತಿಗಾಗಿ ಹಾಗೂ ವಿಷಯವನ್ನು ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಅಳವಡಿಸಲು.
3. ಆಪ್ತಕಾರ್ಯದರ್ಶಿಗಳು, ಮಾನ್ಯ ಕುಲಪತಿಗಳ ಕಾರ್ಯಾಲಯ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ.
4. ಆಪ್ತಕಾರ್ಯದರ್ಶಿಗಳು, ಮಾನ್ಯ ಕುಲಸಚಿವರ ಕಾರ್ಯಾಲಯ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ.